(162)

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ಎಲ್.ಭೋಜೇಗೌಡ ರವರು ಪ್ರಸ್ತಾಪಿಸಿರುವ ನಿಯಮ- 72ರ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

"ಬೆಂಗಳೂರು ನಗರದ ಬಿ.ಟಿ.ಎಂ ಸ್ಟೇಜ್-1 ಮತ್ತು 2 ಹಾಗೂ ಮಾರುತಿನಗರದ ಮುಖ್ಯ ರಸ್ತೆಗಳಲ್ಲಿ ರಾತ್ರಿಯ ಸಮಯದಲ್ಲಿ ಅಂಗಡಿಮುಂಗಟ್ಟುಗಳನ್ನು ಸರಿಯಾದ ಸಮಯದಲ್ಲಿ ಮುಚ್ಚದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಮತ್ತು ಪೊಲೀಸರು ಸಹ ಯಾವುದೇ ರೀತಿಯ ಸರಿಯಾದ ಕಾರ್ಯನಿರ್ವಹಿಸದೇ ಇರುವುದರಿಂದ ಆ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು, ವಾಹನ ದಟ್ಟಣೆ ಹೆಚ್ಚಾಗುತ್ತಿದೆ. ಸದರಿ ಜಾಗಗಳಲ್ಲಿ ಹೊರ ರಾಜ್ಯದ ಮತ್ತು ಪುಂಡರ ಹಾವಳಿಯು ಹೆಚ್ಚಾಗಿರುತ್ತದೆ. ಇದರಿಂದಾಗಿ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಭಯದಿಂದ ಸಂಚರಿಸುವಂತಾಗಿರುತ್ತದೆ. ಆದುದರಿಂದ ಸದರಿ ರಸ್ತೆಗಳಲ್ಲಿ ಸರಿಯಾದ ಸಮಯಕ್ಕೆ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸದ ಇರುವವರ ಮೇಲೆ ಕಠಿಣ ಕ್ರಮ ಕೈಗೊಂಡು ಪುಂಡರ ಹಾವಳಿ ಹಾಗೂ ವಾಹನ ದಟ್ಟಣೆಯನ್ನು ತಪ್ಪಿಸಿ ನಿರ್ಭೀತಿಯಿಂದ ಸಂಚರಿಸಲು ಶಾಶ್ವತವಾಗಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ".

**ಉತ್ತರ:** ಬೆಂಗಳೂರು ನಗರದ (ಮಡಿವಾಳ ಸಂಚಾರ ಠಾಣಾ ಮತ್ತು ಮೈಕೋ ಲೇಔಟ್ ಸಂಚಾರ ಠಾಣಾ ಸರಹದ್ದು) ಬಿ.ಟಿ.ಎಂ ಸ್ಟೇಜ್-1 ಮತ್ತು 2ರಲ್ಲಿ ಹಾಗೂ ಮಾರುತಿನಗರದ ಮುಖ್ಯ ರಸ್ತೆಗಳಲ್ಲಿ ರಾತ್ರಿಯ ಸಮಯದಲ್ಲಿ ಅಂಗಡಿ ಮುಂಗಟ್ಟುಗಳನ್ನು ಸರಿಯಾದ ಸಮಯದಲ್ಲಿ ಮುಚ್ಚದೇ ಇರುವುದರಿಂದ ವಾಹನ ದಟ್ಟಣೆ ಪುಂಡರ ಹಾವಳಿಯನ್ನು ತಪ್ಪಿಸಲು ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.

1) ಆಗ್ನೇಯ ವಿಭಾಗ ಸರಹದ್ದಿನಲ್ಲಿ, ರಾತ್ರಿ ವೇಳೆ ಅಂಗಡಿ ಮುಂಗಟ್ಟುಗಳನ್ನು ನಿಗದಿತ ಸಮಯದಲ್ಲಿ ಕ್ಲೋಸ್ ಮಾಡಿಸುವಂತೆ ಪ್ರತಿ ದಿನ ರೋಲ್ ಕಾಲ್ ಸಮಯದಲ್ಲಿ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಚಿಸಲಾಗಿದೆ, ಅದರಂತೆ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಅಂಗಡಿ ಮುಂಗಟ್ಟುಗಳನ್ನು ನಿಗದಿತ ಸಮಯದಲ್ಲಿ ಕ್ಲೋಸ್ ಮಾಡಿಸುತ್ತಿರುತ್ತಾರೆ.

2) ಅವಧಿ ಮೀರಿ ತೆರೆದಿದ್ದ 2 ವೈನ್ ಶಾಪ್‌ಗಳ ಮೇಲೆ ದಿನಾಂಕ: 23-02-2026 ರಂದು ಮೊ.ಸಂ: 81/2026 ಕಲಂ KARNATAKA EXCISE ACT, 1965 U/s: 36 (1) (B) & ದಿನಾಂಕ: 05-03-2026 ರಂದು ಮೊ.ಸಂ: 99/2026 ಕಲಂ KARNATAKA EXCISE ACT, 1965 U/s: 36, 38 ರೀತ್ಯಾ ಪ್ರಕರಣ ದಾಖಲಿಸಿದೆ.

3) ರಾತ್ರಿ ಗಸ್ತಿನಲ್ಲಿರುವ ಪಿ.ಎಸ್.ಐ ರವರು ಸಹ ನಿಗದಿತ ಅವಧಿಯಲ್ಲಿ ಅಂಗಡಿ ಮುಂಗಟ್ಟುಗಳನ್ನು ಕ್ಲೋಸ್ ಮಾಡಿಸಲು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಿ ಹಾಗೂ ಠಾಣಾ ವಾಟ್ಸ್ ಆಪ್ ಗ್ರೂಪ್ ನಲ್ಲಿ ಸಹ ಸೂಚಿಸಿ ನಿಗದಿತ ಅವಧಿಯಲ್ಲಿ ಕ್ಲೋಸ್ ಮಾಡಿಸಲು ಕ್ರಮ ಕೈಗೊಳ್ಳುತ್ತಾರೆ.

4) ಮಡಿವಾಳ ಪೊಲೀಸ್ ಠಾಣಾ ಸರಹದ್ದಿನ ಮಾರುತಿ ನಗರ, ಬಿಟಿಎಂ 1ನೇ ಹಂತದಲ್ಲಿ ಹೆಚ್ಚಾಗಿ ಪಿ.ಜಿಗಳಲ್ಲಿದ್ದು, ಇಲ್ಲಿ ಹೊರ ರಾಜ್ಯದಿಂದ ಬಂದು ವಾಸಮಾಡುವವರ ಸಂಖ್ಯೆ ಅಧಿಕವಾಗಿದ್ದು, ಇವರು ಹೆಚ್ಚಾಗಿ ಐ.ಟಿ/ಬಿ.ಟಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದು, ರಾತ್ರಿ ಪಾಳಿ ಕೆಲಸ/ ಕೆಲಸ ಮುಗಿಸಿಕೊಂಡು ತಡರಾತ್ರಿ ವಾಪಸ್ಸು ಮನೆಗಳಿಗೆ ಬರುವವರೇ ಹೆಚ್ಚಾಗಿರುತ್ತಾರೆ. ಕೆಲವು ಮೈನ್ ಗಳು ಹಾಗೂ ಕ್ರಾಸ್ ರಸ್ತೆಗಳು ಬಹಳ ಕಿರಿದಾಗಿರುತ್ತವೆ.

ಇಲ್ಲಿನ ನಿವಾಸಿಗಳು ತಮ್ಮ ಮನೆಗಳ ಮುಂದೆ ವಾಹನಗಳನ್ನು ಸದರಿ ರಸ್ತೆಗಳಲ್ಲಿ ಪಾರ್ಕ್ ಮಾಡುತ್ತಿರುವ ಕಾರಣ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಕಂಡು ಬಂದಿರುತ್ತದೆ.

5) ಮಾರುತಿ ನಗರ ಮುಖ್ಯರಸ್ತೆಗೆ ಸೇರುವ ಚಿಕ್ಕ ಚಿಕ್ಕ ಕ್ರಾಸ್ ರಸ್ತೆಗಳು ಅಧಿಕವಾಗಿರುತ್ತವೆ. ಎಲ್ಲಾ ಕಡೆಯಿಂದ ವಾಹನಗಳು ಬರುವುದರಿಂದ ಹಾಗೂ ಈ ರಸ್ತೆಯಲ್ಲಿ ವಾಣಿಜ್ಯ ಮಳಿಗೆಗಳು ಅಧಿಕವಾಗಿರುವುದರಿಂದ ಸಾಮಾನ್ಯವಾಗಿ ಯಾವಾಗಲೂ ಸಂಚಾರ ದಟ್ಟಣೆ ಇದ್ದು ಸಂಚಾರ ಪೊಲೀಸರು ಸಿಬ್ಬಂದಿ ನೇಮಿಸಿ ಸಂಚಾರ ದಟ್ಟಣೆ ತೆರವು ಗೊಳಿಸುತ್ತಿದ್ದಾರೆ.

6) ಯಾವುದೇ ಸಾರ್ವಜನಿಕರಿಗೆ ಹಾಗೂ ರಸ್ತೆ ಸಂಚಾರಕ್ಕೆ ತೊಂದರೆಯಾಗದಂತೆ ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತಿದೆ ಮತ್ತು ರಾತ್ರಿ ವೇಳೆಯಲ್ಲಿ ರಾತ್ರಿ ಕರ್ತವ್ಯದ ಗಸ್ತು ಅಧಿಕಾರಿ ಸಿಬ್ಬಂದಿಗಳು (ಬೀಟ್ ಮತ್ತು ಹೊಯ್ಸಳ) ಠಾಣಾ ವ್ಯಾಪ್ತಿಯಲ್ಲಿ ನಿರಂತರ ಗಸ್ತು ನಡೆಸಿ ಪುಂಡರ ಹಾವಳಿ ಜರುಗದಂತೆ ನೋಡಿಕೊಂಡು ಮಹಿಳೆಯರು ಮತ್ತು ವೃದ್ಧರಿಗೆ ಭಯರಹಿತವಾಗಿ ಸಂಚರಿಸಲು ಸಹಕಾರಿಯಾಗುವಂತೆ ಕರ್ತವ್ಯ ನಿರ್ವಹಿಸಲಾಗುತ್ತಿದೆ.

7) ಠಾಣಾ ಸರಹದ್ದಿನ ರಸ್ತೆಗಳಲ್ಲಿ ಸಾರ್ವಜನಿಕರ ಓಡಾಡಕ್ಕೆ ತೊಂದರೆಯಾಗುವಂತೆ ಇದ್ದ ಅಂಗಡಿ ಮುಂಗಟ್ಟುಗಳನ್ನು/ವಾಹನಗಳನ್ನು ತೆರವುಗೊಳಿಸಿ, ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

8) ಇನ್ನು ಮುಂದೆಯೂ ಸಹಾ ರಸ್ತೆ ಸಂಚಾರಕ್ಕೆ ಹಾಗೂ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯುಂಟು ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸಂಚಾರ ಪೊಲೀಸರೊಂದಿಗೆ ಸೇರಿ ಠಾಣಾ ಸರಹದ್ದಿನಲ್ಲಿ ವಾಹನ ದಟ್ಟಣೆಯನ್ನು ತಡೆಗಟ್ಟಲು ಪ್ರಯತ್ನಿಸಿ ಸಾರ್ವಜನಿಕರು ನಿರ್ಭೀತಿಯಾಗಿ ಸಂಚರಿಸುವಂತೆ ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹೆಚ್‌ಡಿ 174 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.